ನೀಡಿದವ್ನು ತಂಗರಾಜು. ಸೆಕ್ಯುರಿಟಿಯವರು ಪರಿಶೀಲನೆ ನಡೆಸುವಾಗಲೂ, ವಜ್ರವಿರುವುದು ಗೊತ್ತೇ ಆಗಲಿಲ್ಲ!! ಸುಲಭವಾಗಿ ವಜ್ರವನ್ನು ಅಂಗಡಿಯಿಂದ ಸಾಗಿಸಿದ ಮಾಚಯ್ಯ!! ಅಲ್ವೇನೋ ಮಾಚಯ್ಯ?"

ಮಾಚಯ್ಯ ಹೂಂಗುಟ್ಟುವಂತೆ ತಲೆ ಆಡಿಸಿದ.

"ತಂಗರಾಜು ಮಾಚಯ್ಯನೊಂದಿಗೆ ತನ್ನ ಸಹೋದ್ಯೋಗಿಯೊಬ್ಬ ವ್ಯವಹರಿಸುವಂತೆ ಮಾಡಿದ. ಆದ್ರೆ ಉಡುಗೊರೆಯಾಗಿ ಪೇಪರ್ ವೆಯಿಟ್‌ನ್ನು ಮಾತ್ರ ತಾನು ಕೊಟ್ಟ. ಎಲ್ಲೂ ತನ್ನ ಮೇಲೆ ಅನುಮಾನ ಬರದಂತೆ ಮಾಡಲು. ಷೋರೂಮಿನವರು ಸಂಜೆ ದಾಸ್ತಾನು ಪರಿಶೀಲಿಸಿದಾಗ, ವಜ್ರ ನಾಪತ್ತೆಯಾಗಿದ್ದು ಕಂಡು ಬಂತು. ಅವರು ಸಿಸಿಟೀವಿ ಮೂಲಕ ಪರಿಶೀಲಿಸಿದಾಗ ಏನೂ ಪತ್ತೆಯಾಗಲಿಲ್ಲ. ನಂತ್ರ ಆ ದಿನ ಬಂದ ಗಿರಾಕಿಗಳ ಮೇಲೆ ಗಮನ ಹರಿಸಿದರು. ಆವಾಗ ಮಾಚಯ್ಯ ಕೊಟ್ಟ ವಿಳಾಸ ನಕಲಿ ಅಂತ ಗೊತ್ತಾಯಿತು. ಆತನ ಮೊಬೈಲು ಸ್ವಿಚ್ ಆಫ್ ಆಗಿತ್ತು. ಪೊಲೀಸರು ಆತನೊಂದಿಗೆ ವ್ಯವಹರಿಸಿದ ಉದ್ಯೋಗಿಯ ಮೇಲೆ ಸಂಶಯಪಟ್ಟರು. ತಂಗರಾಜು ತಪ್ಪಿಸಿಕೊಂಡ."

"ಈ ಘಟನೆ ಡಿಸೆಂಬರ್ ಹನ್ನೆರಡಕ್ಕೂ ಮೊದಲೇ ನಡೀತೆ? ಪತ್ರಿಕೆಗಳಲ್ಲಿ ಈ ಸುದ್ದಿನೇ ಬಂದಂತಿಲ್ಲ..."

"ಬಿದ್ದಪ್ಪ, ಈ ಘಟನೆ ನಡೆದಿದ್ದು ಡಿಸೆಂಬರ್ ಹನ್ನೆರಡರಂದು. ಆದ್ರೆ ಪತ್ರಿಕೆಗಳಲ್ಲಿ ಬಂದಿದ್ದು ಡಿಸೆಂಬರ್ ಹದಿನೈದರಂದು. ಯಾಕೆ ಗೊತ್ತೆ? ಪತ್ರಿಕೆಗಳಲ್ಲಿ ಬಂದರೆ, ಆರೋಪಿ ಓಡಿಹೋಗಬಹುದು ಎನ್ನುವ ದೃಷ್ಟಿಯಿಂದ. ಕಳವಿನ ಬಗ್ಗೆ ಗೊತ್ತೇ ಅಗದಂತೆ ಮಾಡಿದರೆ ಸುಲಭವಾಗಿ ಹಿಡಿಯಬಹುದು ಎಂದು. ಮಾಚಯ್ಯನ ವಿಳಾಸ ನಕಲಿ ಅಂತ ಗೊತ್ತಾದ ತಕ್ಷಣ ಪತ್ರಿಕೆಗಳಲ್ಲಿ ಸುದ್ದಿ ಬಂತು. ಪೇಪರ್ ವೆಯಿಟ್ ಬಗ್ಗೆ ನನ್ಗೆ ಅನುಮಾನವಿತ್ತು. ಹಾಗಾಗಿ ಹನ್ನೆರಡರ ನಂತ್ರದ ಪತ್ರಿಕೆಗಳನ್ನೂ ಜಾಲಾಡಿದೆ."

"ಪೇಪರ್ ವೆಯಿಟ್‌ನಲ್ಲಿ ವಜ್ರ ಉಂಟು ಅಂತ ಹೇಗೆ ಗೊತ್ತಾಯಿತು? ತಂಗರಾಜು ಪೇಪರ್ ವೆಯಿಟ್‌ನ್ನು ಓಂಕಾರಯ್ಯನಿಗೆ ಯಾಕೆ ನೀಡ್ದ?"

"ಪೇಪರ್ ವೆಯಿಟ್ ಸರಬರಾಜುದಾರನಲ್ಲಿ ವಿಚಾರಿಸಿದಾಗ ಆತ ಟೊಳ್ಳಾದ ಪೇಪರ್ ವೆಯಿಟ್ ಬಗ್ಗೆ ಬಾಯಿಬಿಟ್ಟ. ತಂಗರಾಜು ಯಾಕೆ ಓಂಕಾರಯ್ಯನಿಗೆ ಪೇಪರ್ ವೆಯಿಟ್ ಇರುವ ಚೀಲ ಕೊಟ್ಟ? ಆ ಪೇಪರ್ ವೆಯಿಟ್‌ನಲ್ಲಿ ಖಂಡಿತವಾಗಿ ವಜ್ರ ಇಲ್ಲವೆಂದು ನಾನು ತರ್ಕಿಸಿದೆ. ಹಾಗಿದ್ರೆ ಅದನ್ನು ಕೊಟ್ಟ ಉದ್ದೇಶ ಮಾಚಯ್ಯನಿಗೆ ಮೋಸ ಮಾಡುವುದು. ವಜ್ರವನ್ನು ತಾನೇ ಇರಿಸಿಕೊಂಡು, ಅದನ್ನು ಓಂಕಾರಯ್ಯ ಲಪಟಾಯಿಸಿದ್ದಾನೆಂಬ ಭ್ರಮೆ ಹುಟ್ಟಿಸುವುದು! ಓಂಕಾರಯ್ಯನಿಗೂ ಅನುಮಾನ ಬರಬಾರದೆಂದು ಚೀಲದಲ್ಲಿ ಕವರ್, ಪತ್ರಿಕೆ, ಪರ್ಸು ಇರಿಸಿದ. ಅದು ನಿಜವಾದದ್ದೇ ಎನ್ನುವ ನಂಬಿಕೆ ಬರಲೆಂದು. ಓಂಕಾರಯ್ಯ ಬಾಯಿ ಬಿಡಬಾರದೆಂದು ಪರ್ಸ್‌ನಲ್ಲಿ ಕಾಸೂ ಇರಿಸಿದ್ದ. ಮಾಚಯ್ಯ, ನೀನು ವಜ್ರವಿದ್ದ ಪೇಪರ್ ವೆಯಿಟನ್ನು ತಂಗರಾಜುಗೆ ನೀಡಿದ್ದಿಯಲ್ವೇ?"

"ಹೌದು. ನಾವಿಬ್ಬರೂ ಮಧುರೈಗೆ ಓಡಿಹೋಗಲು ಬಸ್ ನಿಲ್ದಾಣಕ್ಕೆ ಬಂದೆವು. ನಾವು ಜೊತೆಯಾಗಿ ಇರುವುದು ಬೇಡ ಎಂದು ತಂಗರಾಜು ಎಚ್ಚರಿಸಿದ್ದ. ಹೋಟೆಲಿಗೆ ಹೋಗಿ ಕಾಫಿ ಕುಡಿಯೋಣ ಎಂದು ಆತ ಹೇಳ್ದ. ಆಗ ಅಲ್ಲಿಗೆ ಪೊಲೀಸರು ಬಂದರು. ನನಗೂ ಭಯವಾಯಿತು. ತಂಗರಾಜು ಫೋನು ಮಾಡಿ, ಯಾವ್ದೋ ವಿಳಾಸ ಬರೆದುಕೊಳ್ಳಲಿಕ್ಕೆ ಹೇಳ್ದ. ನನ್ಗೆ ಏನೂ ಅರ್ಥವಾಗದಿದ್ದೂ, ಬರೆದುಕೊಂಡೆ. ಪೊಲೀಸರು ಕಣ್ಮರೆಯಾದೊಡನೆ, ಹೋಗೋಣ ಅಂತ ತಂಗರಾಜು ಸೂಚನೆ ನೀಡ್ದ. ಆಮೇಲೆ ವಜ್ರವಿರುವ ಪೇಪರ್ ವೆಯಿಟ್ ಸುರಕ್ಷಿತವಾಗಿ ತನ್ನ ಮಿತ್ರನಲ್ಲಿ ಇದೆ ಅಂತ ಹೇಳ್ದ. ಮಿತ್ರನಲ್ಲಿ ಸುಳ್ಳು ಹೇಳಿದ್ದರಿಂದ ವಿಳಾಸ ತಾನೇ ಬರೆದುಕೊಳ್ಳಲಾಗಲಿಲ್ಲ ಅಂತಂದ. ಚೀಲವನ್ನು ಓಂಕಾರಯ್ಯನಿಗೆ ನೀಡುವುದನ್ನು ನಾನೂ ಗಮನಿಸಿದ್ದೆ. ಅದರಲ್ಲಿ ಪೇಪರ್ ವೆಯಿಟ್ ಇದ್ದಿದ್ದು ಗೊತ್ತಿತ್ತು. ಅಪರಿಚಿತನಿಗೆ ಕೊಟ್ಟಿದ್ದೇಕೆ ಅಂದಾಗ, ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಂಡರೆ